ಒದಗಿಸಿದ ಅನುಭವ ಪ್ರಮಾಣ ಪತ್ರಗಳ ಜೆರಾಕ್ಸ್ ಪ್ರತಿಗಳು ಹೊಂದಾಣಿಕೆಯಾಗುವ ಬಗ್ಗೆ ಪರಿಶೀಲಿಸಲಾಗಿದೆ. ಪ್ರತಿಗಳನ್ನು ಲಗತ್ತಿಸಿದೆ.

ಅರಣ್ಯ ಪ್ರದೇಶ ಹಾಗೂ ಪ್ರಾಣಿ ಪಕ್ಷಿಗಳ ಸಂರಕ್ಷಣೆ

371 (794) ಶ್ರೀ ತನ್ವೀರ್ ಸೇಠ್ (ನರಸಿಂಹರಾಜ): ಮಾನ್ಯ ಅರಣ್ಯ ಮತ್ತು ಸಣ್ಣ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅರಣ್ಯ ಪ್ರದೇಶವನ್ನು ಸಂರಕ್ಷಿಸುವ ಬಗ್ಗೆ ರಾಜ್ಯ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ ;

ಆ) ಸಾಕಷ್ಟು ಅರಣ್ಯ ಪ್ರದೇಶಗಳಲ್ಲಿ ಪ್ರಾಣಿ ಪಕ್ಷಿಗಳು ನಿರಂತರವಾಗಿ ಸಾವನ್ನಪ್ಪುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ ಪ್ರಾಣಿ ಪಕ್ಷಿಗಳನ್ನು ಸಂರಕ್ಷಿಸುವ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ;

ಇ) ಸಾಕಷ್ಟು ಪ್ರಾಣಿಗಳು ಇತ್ತೀಚೆಗೆ ಗ್ರಾಮ ಮತ್ತು ಪಟ್ಟಣಗಳಲ್ಲಿ ಕಂಡು ಬಂದು ಹಲವು ರೈತರ ಜಮೀನುಗಳನ್ನು ನಾಶಪಡಿಸಿರುವ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು ;

ಈ) ರಾಜ್ಯದಲ್ಲಿ ಅರಣ್ಯ ಅಭಿವೃದ್ಧಿಗೆ ಸರ್ಕಾರ 2010-11ರಲ್ಲಿ ಮೀಸಲಿಟ್ಟಿದ್ದ ಹಣವೆಷ್ಟು ; ಯಾವ ಯಾವ ಜಿಲ್ಲೆಯ ಅರಣ್ಯ ಪ್ರದೇಶಕ್ಕೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು) ?

ಶ್ರೀ ಸಿ.ಹೆಚ್. ವಿಜಯಶಂಕರ್ (ಅರಣ್ಯ ಮತ್ತು ಸಣ್ಣ ಕೈಗಾರಿಕೆ ಸಚಿವರು):

ಅ) ಅರಣ್ಯ ಪ್ರದೇಶವನ್ನು ಸಂರಕ್ಷಿಸಲು ಇಲಾಖೆ ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

1. ಅರಣ್ಯ ಪ್ರದೇಶಗಳನ್ನು ಕಾರ್ಯಯೋಜನೆ ಮತ್ತು ಮೋಜಣಿ ಘಟಕದ ಮುಖಾಂತರ ಮೋಜಣಿ ಮಾಡಿ ಬಂದು ಕಲ್ಲುಗಳನ್ನು ಹಾಕಲಾಗುತ್ತಿದೆ.
2. ಅರಣ್ಯ ಪ್ರದೇಶದ ಕಾರ್ಯ ನಿರ್ವಾಹಕ ರಕ್ಷಣಾ ಸಿಬ್ಬಂದಿಗೆ ಆಧುನಿಕ ತಂತ್ರಜ್ಞಾನದ ವಾಕಿಟಾಕಿ ಮೊಬೈಲ್ ಮುಂತಾದ ಉಪಕರಣಗಳನ್ನು ನೀಡುವುದಲ್ಲದೆ ನಿಸ್ತಂತು ಉಪಕರಣಗಳನ್ನು ಸಹ ಅಳವಡಿಸಲಾಗಿದೆ.

3. ಬೇಸಿಗೆ ಕಾಲದಲ್ಲಿ ಅರಣ್ಯಕ್ಕೆ ಬೆಂಕಿಯಿಂದ ರಕ್ಷಣೆ ಮಾಡಲು ಬೆಂಕಿ ತಡೆ ರೇಖೆಗಳನ್ನು ನಿರ್ಮಾಣ ಮಾಡುವುದಲ್ಲದೆ, ಬೆಂಕಿ ರಕ್ಷಣಾ ಕಾವಲುಗಾರರನ್ನು ಸಹ ನೇಮಿಸಲಾಗುತ್ತಿದೆ.
4. ರಕ್ಷಣಾ ಸಿಬ್ಬಂದಿಗೆ ಅರಣ್ಯ ರಕ್ಷಣೆಗೆ ಹೊಸ ವಾಹನಗಳನ್ನು ಯೋಜನೆಗಳಲ್ಲಿ ಖರೀದಿಸಿ ಒದಗಿಸಲಾಗುತ್ತಿದೆ.

ಇದೂ ಅಲ್ಲದೆ ವನ್ಯಜೀವಿ ಘಟಕಕ್ಕೆ ಒಳಪಡುವ ರಕ್ಷಿತಾರಣ್ಯ ಪ್ರದೇಶಗಳನ್ನು ಸಂರಕ್ಷಿಸುವ ಸಲುವಾಗಿ ರಾಜ್ಯ ಯೋಜನೆ, ಕೇಂದ್ರ ಪುರಸ್ಕೃತ ಯೋಜನೆ ಹಾಗೂ ಕೇಂದ್ರ ಯೋಜನೆಗಳ ಧನ ಸಹಾಯದಿಂದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಸದರಿ ಕಾಮಗಾರಿಗಳಲ್ಲಿ ಈ ಕೆಳಗಿನ ಕಾಮಗಾರಿಗಳು ಪ್ರಮುಖವಾಗಿರುತ್ತವೆ.

1. ರಾಷ್ಟ್ರೀಯ ಉದ್ಯಾನವನ ಹಾಗೂ ಅಭಯಾರಣ್ಯಗಳ ನಿರ್ವಹಣೆ
2. ರಾಜ್ಯದ ಅರಣ್ಯ ಹಾಗೂ ಅರಣ್ಯೇತರ ಪ್ರದೇಶಗಳಲ್ಲಿರುವ ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಅನುಸೂಚಿಯಲ್ಲಿರುವ ಎಲ್ಲಾ ಪ್ರಾಣಿಗಳ ಸಂರಕ್ಷಣೆ.
3. ನೀರಿನ ಸೌಕರ್ಯವನ್ನು ಒದಗಿಸಿ ಪ್ರಾಣಿಗಳ ಅವಾಸ ಸ್ಥಾನವನ್ನು ಅಭಿವೃದ್ಧಿಗೊಳಿಸುವುದು.
4. ಸುಧಾರಿತ ಸಂಪರ್ಕ ಸಾಧನ ಮತ್ತು ಸಲಕರಣೆಗಳನ್ನು ಮತ್ತು ಎರವಲು ಪಡೆ ಮತ್ತು ಕಳ್ಳಬೇಟೆ ತಡೆ ಶಿಬಿರಗಳ ಮೂಲಕ ರಕ್ಷಣೆ.
5. ರಾಷ್ಟ್ರೀಯ ಉದ್ಯಾನವನಗಳಲ್ಲಿ ಮಾನವ ವಾಸದ ಒತ್ತಡವನ್ನು ಕಡಿತಗೊಳಿಸಲು ಬದಲಿ ವ್ಯವಸ್ಥೆಯ ಮೂಲಕ ಪರಿಸರ ಅಭಿವೃದ್ಧಿ.
6. ಆನೆ ಕಂದಕಗಳು, ಸೋಲಾರ್ ಅಥವಾ ಬ್ಯಾಟರಿ ಪವರ್‌ನ ಬೇಲಿ, ರಬ್ಬರ್ ಗೋಡೆ ನಿರ್ಮಾಣ, ಕಾರಿಡಾರ್ ನಿರ್ಮಾಣದ ಮೂಲಕ ಮಾನವ ಹಾಗೂ ಪ್ರಾಣಿಗಳ ಮಧ್ಯೆ ಇರುವ ಘರ್ಷಣೆಯನ್ನು ಕಡಿಮೆ ಮಾಡುವುದು.
7. ವನ್ಯಪ್ರಾಣಿಗಳಿಂದಾಗುವ ಮಾನವ ಜೀವಹಾನಿ, ಬೆಳೆಗಳ ನಾಶ ಹಾಗೂ ಸಾಕುಪ್ರಾಣಿಗಳ ನಷ್ಟಕ್ಕೆ ಸಂತ್ರಸ್ಥರಿಗೆ ದಯಾತ್ಮಕ ಧನ ರೂಪದಲ್ಲಿ ಪರಿಹಾರ ನೀಡುವುದು.
8. ಶಿಕ್ಷಣ, ತರಬೇತಿ ಮತ್ತು ಸಂಶೋಧನೆ ಚಟುವಟಿಕೆಗಳು.

ಆ) ಅರಣ್ಯ ಪ್ರದೇಶಗಳಲ್ಲಿ ಪ್ರಾಣಿ ಪಕ್ಷಿಗಳು ಸಾಮಾನ್ಯವಾಗಿ ಸ್ವಾಭಾವಿಕ ರೀತಿಯಲ್ಲಿ ಸಾವನ್ನಪ್ಪುವುದು ಸಹಜವಾಗಿರುತ್ತದೆ.

ಇಲಾಖಾವತಿಯಿಂದ ಪ್ರಾಣಿ ಪಕ್ಷಿಗಳನ್ನು ಸಂರಕ್ಷಿಸುವ ಸಲುವಾಗಿ ಈ ಕೆಳಕಂಡ ಕ್ರಮಗಳನ್ನು ನಿರಂತರವಾಗಿ ತೆಗೆದುಕೊಳ್ಳಲಾಗುತ್ತಿದೆ.

1. ರಾಜ್ಯದಲ್ಲಿರುವ ವನ್ಯಜೀವಿಗಳಿಗೆ ಸಂಪೂರ್ಣ ರಕ್ಷಣೆ ನೀಡುವ ಸಲುವಾಗಿ 5 ರಾಷ್ಟ್ರೀಯ ಉದ್ಯಾನವನಗಳು / 23 ಅಭಯಾರಣ್ಯಗಳು / 4 ಹುಲಿ ಮೀಸಲು ಅರಣ್ಯಗಳು / 2 ಸಂರಕ್ಷಿತ ಮೀಸಲು ಅರಣ್ಯಗಳು ಹಾಗೂ 1 ಸಮುದಾಯ ಮೀಸಲು ಅರಣ್ಯ ಎಂದು ಘೋಷಿಸಲಾಗಿದೆ.
2. ಹೆಚ್ಚಿನ ರಕ್ಷಣೆ ನೀಡುವ ಸಲುವಾಗಿ ಇನ್ನೂ ಹೆಚ್ಚಿನ ಪ್ರದೇಶಗಳನ್ನು ಸಂರಕ್ಷಿತ ಅರಣ್ಯ ಎಂದು ಘೋಷಿಸಲು ಪ್ರಸ್ತಾಪಿಸಿದೆ.
3. ವನ್ಯಪ್ರಾಣಿಗಳಿಗಾಗಿ ಅರಣ್ಯ ಪ್ರದೇಶಗಳ ಒಳಗೆ ನೀರಿನ ಸೌಕರ್ಯವನ್ನು ಸತತವಾಗಿ ಒದಗಿಸಿ ಪ್ರಾಣಿಗಳ ಆವಾಸ ಸ್ಥಾನವನ್ನು ಅಭಿವೃದ್ಧಿಗೊಳಿಸುವುದು.
4. ಅರಣ್ಯ ಪ್ರದೇಶಗಳಲ್ಲಿ ವನ್ಯಪ್ರಾಣಿಗಳಿಗೆ ವರ್ಷವಿಡೀ ಕುಡಿಯುವ ನೀರು ದೊರಕುವಂತೆ ಅರಣ್ಯದಲ್ಲಿರುವ ಕೆರೆಗಳ ಹೂಳು ತೆಗೆಯುವುದು, ಗಲ್ಲಿಪ್ಲಗ್, ಚೆಕ್‌ಡ್ಯಾಮ್, ನಾಲಾಬಂಡಿಂಗ್, ಸೌರಬೇಲಿ, ಆನೆ ತಡೆ ಕಂದಕ ಇತ್ಯಾದಿ ಕೆಲಸಗಳನ್ನು ಸಹ ರಕ್ಷಿತಾರಣ್ಯಗಳಲ್ಲಿ ತೆಗೆದುಕೊಳ್ಳಲಾಗಿದೆ.
5. ಸ್ಥಳೀಯ ಜನರಲ್ಲಿ ಕಾಡಿನಲ್ಲಿ ಜರುಗಬಹುದಾದ ವನ್ಯಜೀವಿ ಅಪರಾಧಗಳನ್ನು ತಪ್ಪಿಸುವ ಬಗ್ಗೆ ಅರಿವನ್ನು ಮೂಡಿಸುವ ಮೂಲಕ ಅವರ ಸಹಕಾರ ಪಡೆದು ವನ್ಯಜೀವಿ ಅಪರಾಧಗಳನ್ನು ತಡೆಗಟ್ಟುವುದು.
6. ಆರಕ್ಷಕ ಇಲಾಖೆ – ಅರಣ್ಯ ಇಲಾಖೆಗಳ ಮಧ್ಯೆ ಸಹಕಾರ ಮತ್ತು ಉತ್ತಮ ಸೌಹಾರ್ದ ಬೆಳೆಸಿ ಕಾಡಿನಲ್ಲಿ ಜರುಗಬಹುದಾದ ವನ್ಯಜೀವಿ ಅಪರಾಧಗಳನ್ನು ತಡೆಗಟ್ಟುವುದು.
7. ಅರಣ್ಯದ ಅಂಚಿನ ಸೂಕ್ಷ್ಮ ಪ್ರದೇಶಗಳನ್ನು ಗುರ್ತಿಸಿ ಅಲ್ಲಿನ ಬುಡಕಟ್ಟು ಜನರನ್ನು ವಾಚರುಗಳನ್ನಾಗಿ ನೇಮಿಸಿ ಕಳ್ಳಬೇಟೆ ತಡೆ ಶಿಬಿರಗಳನ್ನು ನಿರ್ಮಿಸುವುದು.

8. ನಡೆಯಬಹುದಾದ ವನ್ಯಜೀವಿ ಅಪರಾಧಗಳನ್ನು ಕಂಡುಹಿಡಿದು ವಿವರಗಳನ್ನು ಇಲಾಖೆಗೆ ತಿಳಿಸುವ ಬಾತ್ಮೀದಾರರು/ಮಾಹಿತಿದಾರರು/ ಜಾಗೃತ ವ್ಯವಸ್ಥೆಗಳನ್ನು ಅಳವಡಿಸುವುದು.
9. ಇಲಾಖೆ ಸಿಬ್ಬಂದಿಗಳನ್ನು ದಿನದ 24 ಗಂಟೆಗಳಲ್ಲೂ ವ್ಯವಸ್ಥಿತವಾಗಿ ಕಾಯಲು ಕಾವಲುಪಡೆ ನೇಮಿಸಲಾಗಿದೆ ಮತ್ತು ಕಾವಲು ವ್ಯವಸ್ಥೆಯನ್ನು ಸೂಕ್ತ ಮೇಲಾಧಿಕಾರಿಗಳಿಂದ ಮೇಲ್ವಿಚಾರಣೆ ಮಾಡಲಾಗುವುದು.
10. ಬೆಂಕಿ ತಗುಲದಂತೆ ಸಂರಕ್ಷಣೆ ಕಾರ್ಯಗಳನ್ನು ಕೈಗೊಳ್ಳುವುದು.
11. ಸಾರ್ವಜನಿಕರ ಸಹಕಾರವನ್ನು ಗಳಿಸುವ ದೃಷ್ಟಿಯಿಂದ ಅರಣ್ಯದ ಒತ್ತು (ಅಂಚಿನಲ್ಲಿರುವ) ಭಾಗಗಳಲ್ಲಿರುವ ಜನರಿಗೆ ಆರ್ಥಿಕ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳುವುದು. (ಪರಿಸರ ಅಭಿವೃದ್ಧಿ)
12. ಬೇಟೆಯನ್ನು ಸಂಪೂರ್ಣ ನಿಷೇಧಿಸಿ ಅಪರಾಧಿಗಳನ್ನು ವನ್ಯಜೀವಿ ಸಂರಕ್ಷಣಾ ಕಾಯ್ದೆಯ–1972 ಪ್ರಕಾರ ಮೊಕದ್ದಮೆ ದಾಖಲು ಮಾಡುವುದು.
13. ವನ್ಯಪ್ರಾಣಿಗಳಿಂದ ಜೀವಹಾನಿ ಹಾಗೂ ಆಸ್ತಿ, ಬೆಳೆ ನಾಶ ಉಂಟಾಗುವಾಗ ವನ್ಯಪ್ರಾಣಿಗಳ ಮೇಲೆ ದ್ವೇಷದಿಂದ ಅಥವಾ ಹತೋಟಿಗಾಗಿ ಅವುಗಳಿಗೆ ತೊಂದರೆ ನೀಡದಂತೆ ಸಂತ್ರಸ್ಥರಿಗೆ ಸೂಕ್ತ ಪರಿಹಾರವನ್ನು ದಯಾತ್ಮಕ ಧನ ರೂಪದಲ್ಲಿ ಪಾವತಿಸುವುದು.
14. ತರಬೇತಿ ಮತ್ತು ತಿಳುವಳಿಕೆ ನೀಡಲು ಶಿಬಿರಗಳನ್ನು ರಚಿಸುವುದು.

ಇ) ವನ್ಯಪ್ರಾಣಿಗಳು ಗ್ರಾಮ ಮತ್ತು ಪಟ್ಟಣಗಳಲ್ಲಿನ ರೈತರ ಜಮೀನುಗಳನ್ನು ನಾಶಪಡಿಸುವುದನ್ನು ತಡೆಯಲು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1. ವನ್ಯಪ್ರಾಣಿಗಳ ಹಾವಳಿ ಅಧಿಕವಾಗಿರುವ ಸೂಕ್ಷ್ಮ ಸ್ಥಳಗಳಲ್ಲಿ ಅರಣ್ಯ ಪ್ರದೇಶದ ಅಂಚಿನಲ್ಲಿ ಆನೆ ನಿರೋಧಕ ಕಂದಕಗಳನ್ನು ನಿರ್ಮಾಣ ಮಾಡುವುದು.
2. ವನ್ಯಪ್ರಾಣಿಗಳ ಹಾವಳಿ ಇರುವ ಸ್ಥಳಗಳಲ್ಲಿ ಅರಣ್ಯ ಪ್ರದೇಶಗಳ ಅಂಚಿನಲ್ಲಿ ಸೌರಶಕ್ತಿ ಬೇಲಿ ನಿರ್ಮಾಣ ಮಾಡುವುದು.
3. ವನ್ಯಪ್ರಾಣಿಗಳು ಅರಣ್ಯ ಪ್ರದೇಶದಿಂದ ಸಾರ್ವಜನಿಕರ ವಸಾಹತುಗಳಿಗೆ ನುಗ್ಗಿ ಹಾವಳಿ ನಡೆಸುವುದನ್ನು ನಿಯಂತ್ರಿಸಲು ಕಾವಲುಗಾರರ ತಾತ್ಕಾಲಿಕ ಕಾವಲು ಪಡೆಗಳನ್ನು ನಿಯೋಜಿಸುವುದು

4. ಅರಣ್ಯ ಪ್ರದೇಶಗಳಲ್ಲಿ ವನ್ಯಪ್ರಾಣಿಗಳಿಗೆ ವರ್ಷವಿಡೀ ಕುಡಿಯುವ ನೀರು ದೊರಕುವಂತೆ ಅರಣ್ಯದಲ್ಲಿರುವ ಕೆರೆಗಳ ಹೂಳು ತೆಗೆಯುವುದು.
5. ಸಾರ್ವಜನಿಕ ಆಸ್ತಿ ಪಾಸ್ತಿಗಳಿಗೆ ಹಾಗೂ ಮಾನವ ಸಾವಿಗೆ ಕಾರಣವಾಗಿರುವ ವನ್ಯಪ್ರಾಣಿಗಳನ್ನು ಗುರುತಿಸಿ ಅವುಗಳನ್ನು ಹಿಡಿದು ಸ್ಥಳಾಂತರಿಸುವುದು.
6. ಸಕಾಲದಲ್ಲಿ ಬೆಳೆನಾಶಕ್ಕೆ ಪರಿಸರ (ದಯಾತ್ಮಕ ಧನ) ನೀಡಲಾಗುವುದು.

ಈ) ರಾಜ್ಯದಲ್ಲಿ ಅರಣ್ಯ ಅಭಿವೃದ್ಧಿಗಾಗಿ ಸರ್ಕಾರ 2010–11ನೇ ಸಾಲಿನಲ್ಲಿ ಮೀಸಲಿಟ್ಟಿರುವ ಹಣದ ವಿವರ ಮತ್ತು ಜಿಲ್ಲಾವಾರು ವಿವರಗಳನ್ನು ಅನುಬಂಧ–1 ಮತ್ತು 2ರಲ್ಲಿ ಲಗತ್ತಿಸಿದೆ.

ಅನುಬಂಧ–1

ಈ. ರಾಜ್ಯದಲ್ಲಿ ಅರಣ್ಯಾಭಿವೃದ್ಧಿಗಾಗಿ ಸರ್ಕಾರ 2010–11ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ ಮೀಸಲಿಟ್ಟಿರುವ ಹಣದ ವಿವರವನ್ನು ತೋರಿಸುವ ತಃಖ್ತೆ

ಕ್ರಮ ಸಂಖ್ಯೆ	ಯೋಜನೆಯ ವಿವರ	2010–11ನೇ ಸಾಲಿನಲ್ಲಿ ಮೀಸಲಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)
	ಜಿಲ್ಲಾ ವಲಯ ಯೋಜನೆಗಳು	
1	ವಿಶೇಷ ಅಭಿವೃದ್ಧಿ ಯೋಜನೆ	2000.00
	ಒಟ್ಟು	**2000.00**
	ರಾಜ್ಯ ಸರ್ಕಾರದ ಯೋಜನೆಗಳು	
2	ಕ್ಷೀಣಿತ ಅರಣ್ಯ ಅಭಿವೃದ್ಧಿ ಯೋಜನೆ	400.00
3	ನಗರ ಪ್ರದೇಶ ಹಸುರೀಕರಣ	550.00
4	ಶ್ರೀಗಂಧ ನೆಡುತೋಪು ರಕ್ಷಣೆ ಮತ್ತು ನಿರ್ವಹಣೆ	250.00

ಕ್ರಮ ಸಂಖ್ಯೆ	ಯೋಜನೆಯ ವಿವರ	2010–11ನೇ ಸಾಲಿನಲ್ಲಿ ಮೀಸಲಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)
5	ಜೈವಿಕ ಇಂಧನ ನೆಡುತೋಪು ಅಭಿವೃದ್ಧಿ ಯೋಜನೆ	100.00
6	ಅರಣ್ಯ ಸಂಶೋಧನೆ	250.00
7	ಔಷಧೀಯ ಸಸ್ಯಗಳ ರಕ್ಷಣೆ ಮತ್ತು ನಿರ್ವಹಣೆ ಹಾಗೂ ಅಭಿವೃದ್ಧಿ	100.00
8	ಸಾರ್ವಜನಿಕ ವಿತರಣೆಗಾಗಿ ಸಸಿಬೆಳೆಸುವ ಯೋಜನೆ	128.32
9	ಹಸಿರು ಸಮೃದ್ಧಿ ಯೋಜನೆ	290.00
10	ವಿಶೇಷ ಘಟಕ ಯೋಜನೆ	454.00
11	ದೇವರ ಕಾಡು ಅಭಿವೃದ್ಧಿ ಯೋಜನೆ	76.52
12	ಅರಣ್ಯ ಅಭಿವೃದ್ಧಿ ನಿಧಿ ಯೋಜನೆ	5000.00
13	ಪರಿಹಾರಾತ್ಮಕ ನೆಡುತೋಪು ಯೋಜನೆ	651.280
14	ಪರಿಹಾರಾತ್ಮಕ ಅರಣ್ಯೀಕರಣ ಯೋಜನೆ	208.00
	ಒಟ್ಟು	8458.12
	ಬಾಹ್ಯ ನೆರವಿನ ಯೋಜನೆ	
15	ಕರ್ನಾಟಕ ಸ್ವಸ್ಥಿರ ಅರಣ್ಯ ಮತ್ತು ಜೀವ ವೈವಿಧ್ಯ ಸಂರಕ್ಷಣೆ	7698.60
	ಒಟ್ಟು	7698.60
	ಕೇಂದ್ರ ಸರ್ಕಾರದ ಯೋಜನೆಗಳು	
16	ಕಾಂಡ್ಲವನ ಸಂರಕ್ಷಣೆ ಮತ್ತು ನಿರ್ವಹಣೆ	150.00

ಕ್ರಮ ಸಂಖ್ಯೆ	ಯೋಜನೆಯ ವಿವರ	2010–11ನೇ ಸಾಲಿನಲ್ಲಿ ಮೀಸಲಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)
17	ಅರಣ್ಯ ಅಭಿವೃದ್ಧಿ ಕಾರ್ಯಕ್ರಮ	1580.994
18	ಬೊಂಬು ಅಭಿವೃದ್ಧಿ ಯೋಜನೆ	347.240
19	ಕಾಂಪಾ	5091.600
	ಒಟ್ಟು	**7169.834**
	ಜುಮ್ಲಾ	**25326.554**

ಅನುಬಂಧ–2

ಈ. ಜಿಲ್ಲಾವಾರು ಅರಣ್ಯ ಪ್ರದೇಶಕ್ಕೆ ಬಿಡುಗಡೆ ಮಾಡಿರುವ ಹಣದ ವಿವರವನ್ನು ತೋರಿಸುವ ತಃಖ್ತೆ

ಕ್ರಮ ಸಂಖ್ಯೆ	ಜಿಲ್ಲೆ	ಮೊತ್ತ
1	ಬೆಂಗಳೂರು ನಗರ	29.380
2	ಬೆಂಗಳೂರು ಗ್ರಾಮಾಂತರ	356.533
3	ಮಂಗಳೂರು	918.567
4	ಉಡುಪಿ	976.025
5	ಕೊಡಗು	232.180
6	ಹಾಸನ	224.997
7	ತುಮಕೂರು	385.670
8	ಬೆಳಗಾಂ	1564.301
9	ಬಾಗಲಕೋಟೆ	488.371
10	ಬಿಜಾಪುರ	28.733

11	ಶಿವಮೊಗ್ಗ	1654.520
12	ದಾವಣಗೆರೆ	502.476
13	ಚಿಕ್ಕಮಗಳೂರು	1353.38
14	ಧಾರವಾಡ	532.616
15	ಗದಗ	527.006
16	ಹಾವೇರಿ	959.471
17	ಗುಲ್ಬರ್ಗಾ	275.015
18	ಬೀದರ್	176.588
19	ರಾಯಚೂರು	181.410
20	ಯಾದಗಿರಿ	199.823
21	ಮೈಸೂರು	1069.036
22	ಮಂಡ್ಯ	677.843
23	ಕೋಲಾರ	344.992
24	ಚಿಕ್ಕಮಗಳೂರು	162.155
25	ರಾಮನಗರ	209.929
26	ಚಾಮರಾಜನಗರ	131.800
27	ಬಳ್ಳಾರಿ	921.085
28	ಚಿತ್ರದುರ್ಗ	482.931
29	ಕೊಪ್ಪಳ	199.663
30	ಉತ್ತರ ಕನ್ನಡ	7812.00
		23578.496